# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 567 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11-03-2025 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಘನತ್ಯಾಜ್ಯ ನಿರ್ವಹಣೆ ಮಾಡಲು ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು; | • ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಅಗತ್ಯ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br>• ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗೆ ಅಗತ್ಯವಾದ ವಾಹನ ಮತ್ತು ಯಂತ್ರೋಪಕರಣಗಳನ್ನು ಖರೀದಿಸಲಾಗಿದೆ.<br>• ಹಾಗೆಯೇ ತ್ಯಾಜ್ಯ ಸಂಸ್ಕರಣೆಗೆ ಅಗತ್ಯವಾದ Windrow Platform, Trammel screen, Processing shed, Leachate treatment system, Sanitary Landfill, ಕಾಂಪೌಂಡ್ ಗೋಡೆ, Weigh bridge, ಸಂಪರ್ಕ ರಸ್ತೆ, ಒಳ ರಸ್ತೆಗಳು ಸೇರಿದಂತೆ ಇತರ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br>• ಈ ಯೋಜನೆಯಡಿ ಅಭಿವೃದ್ಧಿಪಡಿಸಿದ ಮೂಲಸೌಕರ್ಯವನ್ನು ಉಪಯೋಗಿಸಿಕೊಂಡು ನಗರ ಸ್ಥಳೀಯ ಸಂಸ್ಥೆಗಳು ಪ್ರಸ್ತುತ ತ್ಯಾಜ್ಯ ಸಂಸ್ಕರಣೆ ಮಾಡುತ್ತಿವೆ. |
| ಆ) | ಘನತ್ಯಾಜ್ಯ ನಿರ್ವಹಣೆಗಾಗಿ ಯಾವ ಯಾವ ಸಂಸ್ಥೆಗಳನ್ನು ಯಾವ ಮಾನದಂಡದ ಆಧಾರದಲ್ಲಿ ಆಯ್ಕೆ ಮಾಡಿ ಅನುದಾನ ಹಂಚಿಕೆ ಮಾಡಲಾಗುತ್ತಿದೆ | • **ಸ್ವಚ್ಛ ಭಾರತ ಮಿಷನ್ (ನಗರ)-1.0** ಯೋಜನೆಯು 2014ನೇ ಸಾಲಿನಲ್ಲಿ ಜಾರಿಗೆ ಬಂದಿದ್ದು, 2017ನೇ ಸಾಲಿನಲ್ಲಿ ಅಂದಿನ ಕಲಬುರಗಿ ಜಿಲ್ಲೆಯ 9 ನಗರ ಸ್ಥಳೀಯ ಸಂಸ್ಥೆಗಳು ಮತ್ತು ಯಾದಗಿರಿ ಜಿಲ್ಲೆಯ 6 ನಗರ ಸ್ಥಳೀಯ ಸಂಸ್ಥೆಗಳು ಸಿದ್ಧಪಡಿಸಿದ ಸಮಗ್ರ ಘನತ್ಯಾಜ್ಯ ವಸ್ತು ನಿರ್ವಹಣಾ ವಿಸ್ತೃತ ಯೋಜನಾ ವರದಿಗೆ ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ಮತ್ತು ರಾಜ್ಯ ಉನ್ನತಾಧಿಕಾರಯುಕ್ತ ಸಮಿತಿಯ ಅನುಮೋದನೆ ನೀಡಲಾಗಿರುತ್ತದೆ.<br>• ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯ ಮಾರ್ಗಸೂಚಿಗಳ ಪ್ರಕಾರ, ಅನುಮೋದಿತ ವಿಸ್ತೃತ ಯೋಜನಾ ವರದಿಯ ಒಟ್ಟು ಬಂಡವಾಳ ಮೊತ್ತದಲ್ಲಿ |

| | | |
|---|---|---|
| | | ಶೇ. 35 ರಷ್ಟು ಕೇಂದ್ರ ಸರ್ಕಾರದ ಅನುದಾನ ಮತ್ತು ಶೇ. 23.33 ರಷ್ಟು ರಾಜ್ಯ ಸರ್ಕಾರದ ಅನುದಾನ ಒದಗಿಸಲಾಗಿದೆ. ಉಳಿದ ಶೇ. 41.67 ರಷ್ಟು ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳು ಭರಿಸುತ್ತಿವೆ.<br><br>• **ಸ್ವಚ್ಛ ಭಾರತ ಮಿಷನ್ (ನಗರ) - 2.0** ಯೋಜನೆಯನ್ನು 2021 ರಿಂದ 2026ನೇ ಸಾಲಿನವರೆಗೆ ಅನುಷ್ಠಾನಗೊಳಿಸಲಾಗುತ್ತಿದೆ.<br><br>• ನಗರಗಳಲ್ಲಿ 2026ರ ವೇಳೆಗೆ ಉತ್ಪತ್ತಿಯಾಗುವ ತ್ಯಾಜ್ಯದ ಪ್ರಮಾಣವನ್ನು ಅಂದಾಜಿಸಿ, ಸಮಗ್ರ ತ್ಯಾಜ್ಯ ಸಂಸ್ಕರಣೆಗೆ ಅಗತ್ಯವಿರುವ ಸೌಕರ್ಯಗಳ ಪೈಕಿ, ಈಗಾಗಲೇ ಸ್ವಚ್ಛ ಭಾರತ ಮಿಷನ್(ನಗರ)-1.0ರಡಿ ಅಭಿವೃದ್ಧಿಪಡಿಸಿರುವ ಸೌಲಭ್ಯಗಳನ್ನು ಹೊರತುಪಡಿಸಿ ಬಾಕಿಯಿರುವ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿರುತ್ತದೆ.<br><br>• ಸ್ವಚ್ಛ ಭಾರತ ಮಿಷನ್(ನಗರ) ಯೋಜನೆಯ ಮಾರ್ಗಸೂಚಿಗಳ ಪ್ರಕಾರ, ಹಸಿತ್ಯಾಜ್ಯ ನಿರ್ವಹಣೆಗೆ, ಒಣತ್ಯಾಜ್ಯ ನಿರ್ವಹಣೆಗೆ, ಸ್ಯಾನಿಟರಿ ನೆಲಭರ್ತಿ ಸೌಲಭ್ಯಗಳ ಅಭಿವೃದ್ಧಿಗೆ, ಪಾರಂಪರಿಕ ತ್ಯಾಜ್ಯ ನಿರ್ವಹಣೆಗೆ, ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯ ನಿರ್ವಹಣೆಗೆ ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಯೋಜನಾ ಬಂಡವಾಳ ವೆಚ್ಚವನ್ನು ಪರಿಗಣಿಸಿ ಕ್ರಿಯಾಯೋಜನೆಗಳನ್ನು ರೂಪಿಸಲಾಗಿದೆ.<br><br>• ಸದರಿ ಯೋಜನೆಯ ಮಾರ್ಗಸೂಚಿಗಳ ರೀತ್ಯಾ ನಗರ ಸ್ಥಳೀಯ ಸಂಸ್ಥೆಗಳ ಜನಸಂಖ್ಯೆಯನ್ನು ಆಧರಿಸಿ ತ್ಯಾಜ್ಯ ನಿರ್ವಹಣೆಯ ಯೋಜನಾ ವೆಚ್ಚದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲನ್ನು ನಿಗಧಿಪಡಿಸಲಾಗಿದ್ದು, ಉಳಿದ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳು ಭರಿಸಬೇಕಿರುತ್ತದೆ. |
| ಇ) | ಸದರಿ ಸಂಸ್ಥೆಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಶೇಕಡವಾರು ಪ್ರಮಾಣ ಎಷ್ಟು: | • **ಸ್ವಚ್ಛ ಭಾರತ ಮಿಷನ್(ನ)-1.0** ರಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುಮೋದಿತ ಯೋಜನಾ ವರದಿಯ ಬಂಡವಾಳ ಮೊತ್ತ ಮತ್ತು ಕೇಂದ್ರ (ಶೇ 35 ರಷ್ಟು) ಹಾಗೂ ರಾಜ್ಯ (ಶೇ 23.30 ರಷ್ಟು) ಸರ್ಕಾರಗಳಿಂದ ಬಿಡುಗಡೆಯಾಗಿರುವ ಅನುದಾನದ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.<br><br>• **ಸ್ವಚ್ಛ ಭಾರತ ಮಿಷನ್(ನ)-2.0** ರಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಘನತ್ಯಾಜ್ಯ ನಿರ್ವಹಣೆಯ ಯೋಜನಾ |

<table>
<tr>
<td></td>
<td></td>
<td>ವೆಚ್ಚದಲ್ಲಿ ಕೇಂದ್ರ ಸರ್ಕಾರವು ಶೇ 50 ರಷ್ಟು ಮತ್ತು ರಾಜ್ಯ ಸರ್ಕಾರವು ಶೇ. 33 ರಷ್ಟು ಅನುದಾನ ನಿಗಧಿಪಡಿಸಿದೆ. ಮಹಾನಗರಪಾಲಿಕೆಯ ಜನಸಂಖ್ಯೆ ಒಂದು ಲಕ್ಷಕ್ಕಿಂತ ಹೆಚ್ಚು ಇರುವ ಕಾರಣ ಘನತ್ಯಾಜ್ಯ ನಿರ್ವಹಣೆಯ ಯೋಜನಾ ವೆಚ್ಚದಲ್ಲಿ ಕೇಂದ್ರ ಸರ್ಕಾರವು ಶೇ. 33 ರಷ್ಟು ಮತ್ತು ರಾಜ್ಯ ಸರ್ಕಾರವು ಶೇ. 22ರಷ್ಟು ಅನುದಾನ ನಿಗಧಿಪಡಿಸಿದೆ. ವಿವರ ಕೆಳಕಂಡಂತಿದೆ.
<table>
<tr><th>ಜನಸಂಖ್ಯೆ</th><th>ಕೇಂದ್ರ ಸರ್ಕಾರದಿಂದ ಮೀಸಲಿರಿಸಿರುವ ಶೇಕಡಾವಾರು ಅನುದಾನ</th><th>ರಾಜ್ಯ ಸರ್ಕಾರದಿಂದ ಮೀಸಲಿರಿಸಿರುವ ಶೇಕಡಾವಾರು ಅನುದಾನ</th><th>ನಗರ ಸ್ಥಳೀಯ ಸಂಸ್ಥೆಯ ಪಾಲು</th></tr>
<tr><td>ಒಂದು ಲಕ್ಷಕ್ಕಿಂತ (<1,00,000) ಕಡಿಮೆ</td><td>50</td><td>33</td><td>17</td></tr>
<tr><td>ಒಂದು ಲಕ್ಷಕ್ಕಿಂತ (> 1,00,000) ಹೆಚ್ಚು</td><td>33</td><td>22</td><td>45</td></tr>
</table>
<ul><li>ಈ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಮೀಸಲಿರಿಸಿದ ಅನುದಾನದ ವಿವರ ಅನುಬಂಧ-2 ರಲ್ಲಿ ಲಗತ್ತಿಸಿದೆ.</li></ul>
</td>
</tr>
<tr>
<td>ಈ)</td>
<td>ಕಳೆದ ಮೂರು ವರ್ಷಗಳಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಖರ್ಚಾಗಿರುವ ಹಣದ ಪ್ರಮಾಣವೆಷ್ಟು?</td>
<td><ul><li>ಕಳೆದ ಮೂರು ವರ್ಷಗಳಲ್ಲಿ ಸ್ವಚ್ಛ ಭಾರತ ಮಿಷನ್ (ನ)-1.0 ರಡಿಯಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಕಲಬುರಗಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ರೂ. 2434.4 ಲಕ್ಷಗಳು ಮತ್ತು ಯಾದಗಿರಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ರೂ. 1137.00 ಲಕ್ಷಗಳು ಖರ್ಚಾಗಿದ್ದು, ವಿವರಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.</li>
<li>ಸ್ವಚ್ಛ ಭಾರತ ಮಿಷನ್ (ನ) -2.0 ರಡಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ಕಳೆದ 3 ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.</li></ul></td>
</tr>
</table>

(ಕಡತ ಸಂಖ್ಯೆ: ನಅಇ 59 ಸಿಎಸ್ಎಸ್ 2025)

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು

ಅನುಬಂಧ-1

**ಸ್ವಚ್ಛ ಭಾರತ ಮಿಷನ್ (ನಗರ)-1.0 ಯೋಜನೆಯಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ** ನಗರ ಸ್ಥಳೀಯ ಸಂಸ್ಥೆಗಳಿಗೆ ಅನುಮೋದಿತ ವಿಸ್ತೃತ ಯೋಜನಾ ವರದಿಯ ಬಂಡವಾಳ ಮೊತ್ತ ಮತ್ತು ಕೇಂದ್ರ ಸರ್ಕಾರ (ಶೇ. 35.00 ರಷ್ಟು) ಹಾಗೂ ರಾಜ್ಯ ಸರ್ಕಾರಗಳಿಂದ (ಶೇ. 23.30 ರಷ್ಟು) ಬಿಡುಗಡೆಯಾದ ಅನುದಾನದ ವಿವರ.

**ಕಲಬುರಗಿಜಿಲ್ಲೆ**

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಘನತ್ಯಾಜ್ಯ ನಿರ್ವಹಣೆ ವಿಸ್ತೃತ ಯೋಜನಾ ವರದಿಯ ಬಂಡವಾಳ ಮೊತ್ತ | ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ (ಶೇ 35) | ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ (ಶೇ 23.3) | ನಗರ ಸ್ಥಳೀಯ ಸಂಸ್ಥೆಯ ನಿಧಿ (ಶೇ 41.67) |
|---|---|---|---|---|---|
| 1 | ಕಲಬುರಗಿ, ಮಹಾನಗರಪಾಲಿಕೆ | 3473.0 | 1215.5 | 810.2 | 1447.2 |
| 2 | ಅಫಜಲಪೂರ, ಪುರಸಭೆ | 77.8 | 27.2 | 18.2 | 32.4 |
| 3 | ಆಳಂದ, ಪುರಸಭೆ | 170.1 | 59.5 | 39.7 | 70.9 |
| 4 | ಚಿಂಚೋಳಿ, ಪುರಸಭೆ | 103.9 | 36.4 | 24.2 | 43.3 |
| 5 | ಚಿತ್ತಾಪುರ, ಪುರಸಭೆ | 157.8 | 55.2 | 36.8 | 65.8 |
| 6 | ಜೇವರ್ಗಿ, ಪುರಸಭೆ | 92.4 | 32.4 | 21.6 | 38.5 |
| 7 | ಸೇಡಂ, ಪುರಸಭೆ | 169.4 | 59.3 | 39.5 | 70.6 |
| 8 | ಶಹಾಬಾದ, ನಗರಸಭೆ | 274.7 | 96.1 | 64.1 | 114.5 |
| 9 | ವಾಡಿ, ಪುರಸಭೆ | 168.9 | 59.1 | 39.4 | 70.4 |
| | **ಒಟ್ಟು** | **4688.0** | **1640.8** | **1093.7** | **1953.5** |

**ಯಾದಗಿರಿಜಿಲ್ಲೆ**

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಘನತ್ಯಾಜ್ಯ ನಿರ್ವಹಣೆ ವಿಸ್ತೃತ ಯೋಜನಾ ವರದಿಯ ಬಂಡವಾಳ ಮೊತ್ತ | ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ (ಶೇ 35) | ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ (ಶೇ 23.3) | ನಗರ ಸ್ಥಳೀಯ ಸಂಸ್ಥೆಯ ನಿಧಿ (ಶೇ 41.67) |
|---|---|---|---|---|---|
| 1 | ಗುರುಮಿಟ್ಕಲ್, ಪುರಸಭೆ | 169.2 | 59.22 | 39.47 | 70.51 |
| 2 | ಕಕ್ಕೇರಾ, ಪುರಸಭೆ | 281.22 | 98.43 | 65.61 | 117.18 |
| 3 | ಕೆಂಬಾವಿ, ಪುರಸಭೆ | 356.8 | 124.88 | 83.24 | 148.68 |
| 4 | ಶಹಪುರ, ನಗರಸಭೆ | 496.77 | 173.87 | 115.90 | 207.00 |
| 5 | ಸುರಪುರ, ನಗರಸಭೆ | 352.23 | 123.28 | 82.18 | 146.77 |
| 6 | ಯಾದಗಿರಿ, ನಗರಸಭೆ | 477.34 | 167.07 | 111.36 | 198.91 |
| | **ಒಟ್ಟು** | **2133.56** | **746.75** | **497.76** | **889.05** |

ಅನುಬಂಧ- 2

# ಸ್ವಚ್ಛ ಭಾರತ ಮಿಷನ್(ನಗರ)- 2.0 ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೀಸಲಿರಿಸಿದ ಅನುದಾನದ ವಿವರ

## ಕಲಬುರಗಿ ಜಿಲ್ಲೆ.

ರೂ. ಲಕ್ಷಗಳಲ್ಲಿ

| ಕ್ರ. ಸಂ | | ಕಲಬುರಗಿ, ಮಹಾನಗರ ಪಾಲಿಕೆ | | ಅಫಜಲಪೂರ, ಪುರಸಭೆ | | ಆಳಂದ, ಪುರಸಭೆ | | ಚಿಂಚೋಳಿ, ಪುರಸಭೆ | | ಚಿತ್ತಾಪುರ, ಪುರಸಭೆ | | ಜೇವರ್ಗಿ, ಪುರಸಭೆ | | ಕಾಳಗಿ, ಪಟ್ಟಣ ಪಂಚಾಯಿತಿ | | ಕಮಲಾಪೂರ, ಪಟ್ಟಣ ಪಂಚಾಯಿತಿ | | ಸೇಡಂ, ಪುರಸಭೆ | | ಶಹಾಬಾದ, ನಗರಸಭೆ | | ವಾಡಿ, ಪುರಸಭೆ | | ಯಡ್ರಾಮಿ, ಪಟ್ಟಣ ಪಂಚಾಯಿತಿ | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | GOI | GOK | GOI | GOK | GOI | GOK | GOI | GOK | GOI | GOK | GOI | GOK | GOI | GOK | GOI | GOK | GOI | GOK | GOI | GOK | GOI | GOK | GOI | GOK |
| 1 | ಹಸಿ ತ್ಯಾಜ್ಯ ನಿರ್ವಹಣೆ ಘಟಕ | 0 | 0 | 0 | 0 | 0 | 0 | 0 | 0 | 0 | 0 | 0 | 0 | 61.32 | 40.75 | 31.38 | 20.78 | 0 | 0 | 0 | 0 | 0 | 0 | 75.31 | 50.08 |
| 2 | ಒಣತ್ಯಾಜ್ಯ ನಿರ್ವಹಣೆ ಘಟಕ (Material Recovery Facility) | 339.4 | 226.3 | 21.25 | 14.03 | 29.75 | 19.64 | 17 | 11.22 | 21.25 | 14.025 | 17 | 11.22 | 8.5 | 5.61 | 8.5 | 5.61 | 25.5 | 16.83 | 34 | 22.44 | 25.5 | 16.83 | 8.5 | 5.61 |
| 3 | ಸ್ಯಾನಿಟರಿ ನೆಲಭರ್ತಿ | 41.34 | 27.56 | 1.6 | 1.056 | 0 | 0 | 0.55 | 0.363 | 2.2 | 1.452 | 0.55 | 0.363 | 2.5 | 1.65 | 3.05 | 2.01 | 1.9 | 1.254 | 0 | 0 | 1 | 0.66 | 2.9 | 1.91 |
| 4 | ಪಾರಂಪರಿಕ ತ್ಯಾಜ್ಯ ನಿರ್ವಹಣೆ | 561.2 | 374.1 | 121.18 | 79.98 | 50.28 | 33.18 | 46.46 | 30.66 | 28.1 | 18.55 | 25.62 | 16.91 | 0 | 0 | 0 | 0 | 38.68 | 25.53 | 25.48 | 16.81 | 23.72 | 15.66 | 0 | 0 |
| 5 | ಕಟ್ಟಡ ನಿರ್ಮಾಣ ಮತ್ತು ಬಗ್ನಾವಶೇಷ ತ್ಯಾಜ್ಯ ನಿರ್ವಹಣೆಗೆ | 114.8 | 76.6 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |

## ಯಾದಗಿರಿ ಜಿಲ್ಲೆ.

ರೂ. ಲಕ್ಷಗಳಲ್ಲಿ

| ಕ್ರ.ಸಂ | | ಗುರುಮಿಟ್ಕಲ್, ಪುರಸಭೆ | | ಹುಣಸಗಿ ಪಟ್ಟಣ ಪಂಚಾಯಿತಿ | | ಕಕ್ಕೇರಾ, ಪುರಸಭೆ | | ಕೆಂಬಾವಿ, ಪುರಸಭೆ | | ಶಹಪುರ, ನಗರಸಭೆ | | ಸುರಪುರ, ನಗರಸಭೆ | | ಯಾದಗಿರಿ, ನಗರಸಭೆ | |
|---|---|---|---|---|---|---|---|---|---|---|---|---|---|---|---|
| | | GOI | GOK | GOI | GOK | GOI | GOK | GOI | GOK | GOI | GOK | GOI | GOK | GOI | GOK |
| 1 | ಹಸಿ ತ್ಯಾಜ್ಯ ನಿರ್ವಹಣೆ ಘಟಕ | 0 | 0 | 44.94 | 29.78 | 0 | 0 | 0 | 0 | 0 | 0 | 0 | 0 | 0 | 0 |
| 2 | ಒಣತ್ಯಾಜ್ಯ ನಿರ್ವಹಣೆ ಘಟಕ (Material Recovery Facility) | 17 | 11.22 | 12.75 | 8.42 | 17 | 11.22 | 17 | 11.22 | 34 | 22.44 | 34 | 22.44 | 46.75 | 30.86 |
| 3 | ಸ್ಯಾನಿಟರಿ ನೆಲಭರ್ತಿ | 0.45 | 0.297 | 4.2 | 2.77 | 2.05 | 1.353 | 1.85 | 1.211 | 0 | 0 | 2.05 | 1.353 | 1.5 | 0.99 |
| 4 | ಪಾರಂಪರಿಕ ತ್ಯಾಜ್ಯ ನಿರ್ವಹಣೆ | 42.31 | 27.92 | 0 | 0 | 0 | 0 | 0 | 0 | 34.24 | 22.6 | 32.87 | 21.69 | 189.95 | 125.36 |
| 5 | ಕಟ್ಟಡ ನಿರ್ಮಾಣ ಮತ್ತು ಬಗ್ನಾವಶೇಷ ತ್ಯಾಜ್ಯ ನಿರ್ವಹಣೆಗೆ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |

ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛ ಭಾರತ ಮಿಷನ್ (ನಗರ)-1.0 ಘನತ್ಯಾಜ್ಯ ನಿರ್ವಹಣೆಗಾಗಿ ಖರ್ಚಾಗಿರುವ ಮೊತ್ತದ ವಿವರ ಕೆಳಕಂಡಂತಿದೆ.

**ಕಲಬುರಗಿ ಜಿಲ್ಲೆ**

**(ರೂ. ಲಕ್ಷಗಳು)**

| **ಕ್ರ. ಸಂ** | **ನಗರ ಸ್ಥಳೀಯ ಸಂಸ್ಥೆಯ ಹೆಸರು** | **ಕಳೆದ ಮೂರು ವರ್ಷದಲ್ಲಿ ಬಿಡುಗಡೆಯಾದ ಮೊತ್ತ** | **ವೆಚ್ಚ** |
|---|---|---|---|
| 1 | ಕಲಬುರ್ಗಿ, ಮಹಾನಗರಪಾಲಿಕೆ | 2025.8 | 1792 |
| 2 | ಅಫಜಲಪೂರ, ಪುರಸಭೆ | 45.4 | 45.4 |
| 3 | ಆಳಂದ, ಪುರಸಭೆ | 99.2 | 65 |
| 4 | ಚಿಂಚೋಳಿ, ಪುರಸಭೆ | 60.6 | 49 |
| 5 | ಚಿತ್ತಾಪುರ, ಪುರಸಭೆ | 92.1 | 88 |
| 6 | ಜೇವರ್ಗಿ, ಪುರಸಭೆ | 53.9 | 54 |
| 7 | ಸೇಡಂ, ಪುರಸಭೆ | 98.8 | 99 |
| 8 | ಶಹಾಬಾದ, ನಗರಸಭೆ | 160.2 | 143 |
| 9 | ವಾಡಿ, ಪುರಸಭೆ | 98.5 | 99 |
| | **ಒಟ್ಟು** | **2734.5** | **2434.4** |

**ಯಾದಗಿರಿ ಜಿಲ್ಲೆ**

**(ರೂ. ಲಕ್ಷಗಳು)**

| **ಕ್ರ. ಸಂ** | **ನಗರ ಸ್ಥಳೀಯ ಸಂಸ್ಥೆಯ ಹೆಸರು** | **ಕಳೆದ ಮೂರು ವರ್ಷದಲ್ಲಿ ಬಿಡುಗಡೆಯಾದ ಮೊತ್ತ** | **ವೆಚ್ಚ** |
|---|---|---|---|
| 1 | ಗುರುಮಿಟ್ಕಲ್, ಪುರಸಭೆ | 98.7 | 99 |
| 2 | ಕಕ್ಕೇರಾ, ಪುರಸಭೆ | 164.0 | 57 |
| 3 | ಕೆಂಬಾವಿ, ಪುರಸಭೆ | 208.1 | 208 |
| 4 | ಶಹಪುರ, ನಗರಸಭೆ | 289.8 | 290 |
| 5 | ಸುರಪುರ, ನಗರಸಭೆ | 205.5 | 205 |
| 6 | ಯಾದಗಿರಿ, ನಗರಸಭೆ | 278.4 | 278 |
| | **ಒಟ್ಟು** | **1244.5** | **1137** |